## Vijaya Karnataka (Namma Mysooru)

**Date:** Saturday, 28th March 2015

**Page No.1**

**Edition:** Mysore

**Language:** Kannada

### ಎಸ್‌ಡಿಎಂಐಎಂಡಿ: 20ನೇ ಘಟಿಕೋತ್ಸವ ಸಂಭ್ರಮ

# ಯುವಜನರಿಂದ ಬದಲಾವಣೆ ಸಾಧ್ಯ

**ವಿಕ ಸುದ್ದಿಲೋಕ,** ಮೈಸೂರು

''ಯುವಜನರಿಂದ ಸಮಾಜದಲ್ಲಿ ಬದಲಾವಣೆ ಹಾಗೂ ಸುಧಾರಣೆ ಸಾಧ್ಯ'' ಎಂದು ಹಿಂದುಜಾ ಸಮೂಹದ ಕಾರ್ಯನಿರ್ವಾಹಕ ಉಪಾಧ್ಯಕ್ಷ ಆರ್.ಸೇಶಸಾಯಿ ಹೇಳಿದ್ದಾರೆ.

ನಗರದ ಚಾಮುಂಡಿಬೆಟ್ಟ ತಪ್ಪಲಿನಲ್ಲಿರುವ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣಾ ಅಭಿವೃದ್ಧಿ ಸಂಸ್ಥೆಯಲ್ಲಿ ಶುಕ್ರವಾರ ನಡೆದ 20ನೇ ಘಟಿಕೋತ್ಸವದಲ್ಲಿ ಅವರು ಘಟಿಕೋತ್ಸವ ಭಾಷಣ ಮಾಡಿದರು.

''ಬದಲಾವಣೆ ನಮ್ಮಿಂದಲೇ ಆರಂಭವಾಗಲಿ ಎನ್ನುವ ಮಹಾತ್ಮ ಗಾಂಧೀಜಿ ಅವರ ಮಾತುಗಳು ಯುವಜನರಿಗೆ ವೇದವಾಕ್ಯವಾಗಬೇಕು. ನನ್ನೊಬ್ಬನಿಂದ ಏನು ಮಾಡಲು ಸಾಧ್ಯ ಹಿಂಜರಿಯಬಾರದು. ಇತಿಹಾಸದ ಪುಟಗಳನ್ನು ತಿರುವಿದರೆ, ಸಾಮಾಜಿಕ, ರಾಜಕೀಯವಾಗಿ ಏನೇ ಕ್ರಾಂತಿಯಾಗಿದ್ದರೂ ಒಬ್ಬ ವ್ಯಕ್ತಿಯಿಂದಲೇ ಎಂಬುದನ್ನು ಗಮನಿಸಬಹುದು. ಇಂಥ ಬದಲಾವಣೆಗಳಿಂದ, ಸಮಾಜದ ಹೆಚ್ಚಿನ ಮಂದಿಗೆ ಅನುಕೂಲವಾಗುತ್ತದೆಯೇ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಮುಂದುವರಿಯಬೇಕು'' ಎಂದು ಸಲಹೆ ನೀಡಿದರು.

**ಸಾಧಿಸಿ ತೋರಿಸಿದ್ದಾರೆ:** ''ಬದಲಾವಣೆಗೆ ಯುವಜನರು ಸಾರಥ್ಯ ವಹಿಸಬಹುದು ಎನ್ನುವುದು ಈಗಾಗಲೇ ಸಾಬೀತಾಗಿದೆ. ಬಹುದೊಡ್ಡ ತಾಂತ್ರಿಕ, ವ್ಯವಹಾರಿಕ ಸಂಸ್ಥೆಗಳು, ಕಂಪನಿಗಳನ್ನು ಹುಟ್ಟುಹಾಕಿದವರು ಯುವಕರೆ. ಅದರಲ್ಲಿಯೂ 20ರಿಂದ 22 ವರ್ಷ ವಯಸ್ಸಿನವರು ಬಹಳ ಸಾಧಿಸಿದ್ದಾರೆ'' ಎಂದರು. pll

ವಿಕ ಚಿತ್ರಲೋಕ




ಮೈಸೂರಿನ ಎಸ್‌ಡಿಎಂಐಎಂಡಿಯಲ್ಲಿ ಶುಕ್ರವಾರ ನಡೆದ 20ನೇ ಘಟಿಕೋತ್ಸವದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ, ಹಿಂದುಜಾ ಸಮೂಹದ ಉಪಾಧ್ಯಕ್ಷ ಆರ್. ಸೇಶಸಾಯಿ, ಡಾ.ಎನ್.ಆರ್.ಪರಶುರಾಮನ್ ಹಾಜರಿದ್ದರು.

## 'ಅಪೂರ್ವ' ಸಾಧನೆ

**ಮಾ**ರುಕಟ್ಟೆ ಅಧ್ಯಯನ, ಹಣಕಾಸು ಅಧ್ಯಯನ, ಕಾರ್ಯಾಚರಣೆ ಅಧ್ಯಯನ, ಮಾನವ ಸಂಪನ್ಮೂಲ ಅಧ್ಯಯನ ಮತ್ತು ಮಾಹಿತಿ ತಂತ್ರಜ್ಞಾನ ಮೊದಲಾದ ವಿಷಯದಲ್ಲಿ ಉತ್ತಮ ಪ್ರತಿಭೆ ತೋರಿದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಪಿ.ಅಪೂರ್ವ ಮೂರು ಚಿನ್ನದ ಪದಕಗಳಿಗೆ ಕೊರಳೊಡ್ಡಿ ಸಂಭ್ರಮಿಸಿದರು. ಉಳಿದಂತೆ, ಎಂ.ಎಸ್.ನಿಶಾಂತ್, ಅಭಿಜಿತ್ ವಿಜೇಂದ್ರ ಕೊರ್ಟಿ, ಕವಿತಾ ಮೂರ್ತಿ ಥಾಮಸ್ ಹಾಗೂ ಎಸ್.ವಿಕಾಸ್ ತಲಾ ಒಂದು ಚಿನ್ನದ ಪದಕ ಪಡೆದರು.